## 87ರ ಹಿರಿಯ; ಜೀವನೋತ್ಸಾಹದ ಹರೆಯ

ಇವರು 87 ವರ್ಷದ ಶಿರುಮನೆ ಮಹಾಬಲೇಶ್ವರಯ್ಯ. ಹೊಸನಗರ ತಾಲ್ಲೂಕಿನ ಮಾರುತಿಪುರದಲ್ಲಿ ಆಂಜನೇಯನ ದೇವಸ್ಥಾನದಲ್ಲಿ 60 ವರ್ಷಗಳಿಂದ ಅರ್ಚಕ ವೃತ್ತಿ ಮಾಡುತ್ತಿದ್ದಾರೆ. ಇಂದಿಗೂ ಹರೆಯದ ಹುಡುಗರನ್ನೂ ನಾಚಿಸುವಂತೆ ಪ್ರತಿನಿತ್ಯವೂ ಹತ್ತಾರು ಕಿಲೋಮೀಟರ್ ಸೈಕಲ್ ತುಳಿದು ದೇವಸ್ಥಾನದ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಾರೆ. ಪ್ರತಿದಿನವೂ 8ರಿಂದ 10 ಅಡಿಗಳಷ್ಟು ಅಡಿಕೆ ಮರಗಳನ್ನು ಏರಿ ವೀಳ್ಯದೆಲೆ ಕೊಯ್ದು, ಅವನ್ನು ಕಟ್ಟುಗಳನ್ನಾಗಿ ಅಚ್ಚುಕಟ್ಟಾಗಿ ಜೋಡಿಸಿ ಮರುದಿನ ದೇವಸ್ಥಾನದ ಸಮೀಪದ ಅಂಗಡಿಯಲ್ಲಿ ಮಾರಾಟ ಮಾಡುತ್ತಾರೆ. ‘ವಯಸ್ಸು ಎಂಬುದು ಬರಿಯ ಸಂಖ್ಯೆ. ಅದು ದೇಹಕ್ಕಾಗುತ್ತದೆಯೇ ವಿನಃ ಮನಸ್ಸಿಗಲ್ಲ, ಜೀವನೋತ್ಸಾಹ ಇದ್ದರೆ ಯಾವ ವಯಸ್ಸಿನಲ್ಲೂ ನಮ್ಮ ಕಾಯಕವನ್ನು ಅಚ್ಚುಕಟ್ಟಾಗಿ ಮಾಡಬಹುದು’ ಎನ್ನುವುದಕ್ಕೆ ಇವರು ಜ್ವಲಂತ ಉದಾಹರಣೆ.

–ಎಚ್.ಎಸ್. ನವೀನಕುಮಾರ್, ಹೊಸದುರ್ಗ







## ರಂಜದ ಹಣ್ಣು

ಇದು ರಂಜದ ಹಣ್ಣು. ಮಲೆನಾಡಿನ ಕಾಡುಗಳಲ್ಲಷ್ಟೇ ಸಿಗುವ ಹಸುರು ಮಿಶ್ರಿತ ಹಳದಿ ಬಣ್ಣದಲ್ಲಿ ಕಾಣಸಿಗುವ ಈ ಹಣ್ಣು ಈಗ ಅಪರೂಪವಾಗಿದೆ. ನಾನು ಚಿಕ್ಕವನಿದ್ದಾಗ ಸೇಬು, ಕಿತ್ತಳೆ, ದಾಳಿಂಬೆಯಂತಹ ಹಣ್ಣುಗಳನ್ನು ಹಬ್ಬಹರಿದಿನಗಳಲ್ಲಷ್ಟೇ ತಿನ್ನುವ ಭಾಗ್ಯ ಸಿಗುತ್ತಿತ್ತು. ಬಾಲ್ಯದಲ್ಲಿ ರಂಜದ ಹಣ್ಣಿನ ಜೊತೆ ಕಾಡಿನಲ್ಲಿ ಸಿಗುತ್ತಿದ್ದ ನೇರಳೆ ಹಣ್ಣು, ಸಂಪಿಗೆ ಹಣ್ಣು, ಹುಳಿಯಾದ ಹುಲಿಗೆ ಹಣ್ಣು, ಚಿಕ್ಕದಾದ ಬೆಮ್ಮರಲಹಣ್ಣು, ಹಲಸಿನ ಹಣ್ಣುಗಳನ್ನು ತಿಂದಿದ್ದೇ ಹೆಚ್ಚು.

ರಂಜದ ಹಣ್ಣು, ಚಿಕ್ಕ ಗಾತ್ರವಿದ್ದರೂ ಅದರ ತಿರುಳು ಸೇಬಿನ ತಿರುಳನ್ನು ಹೋಲುತ್ತದೆ. ಜನವರಿ ತಿಂಗಳಿನಿಂದ ಏಪ್ರಿಲ್, ಮೇ ತಿಂಗಳವರೆಗೂ ಸಿಗುವ ಈ ಹಣ್ಣು ಬಲುರುಚಿ. ರಾಸಾಯನಿಕ ಬಳಸಿ ಬೆಳೆಯುವ ಹಣ್ಣು, ತರಕಾರಿಗಳನ್ನು ತಿನ್ನುವ ಇಂದಿನ ದಿನಗಳಲ್ಲಿ ಯಾವ ರಾಸಾಯನಿಕವಿಲ್ಲದೇ ನೈಸರ್ಗಿಕವಾಗಿ ಬೆಳೆಯುವ ರಂಜದ ಹಣ್ಣಿನಂತಹ ಕಾಡು ಹಣ್ಣುಗಳು ಸದ್ಯಕ್ಕೆ ಪ್ರಾಣಿ ಪಕ್ಷಿಗಳಿಗೆ ಮಾತ್ರ ಸೀಮಿತವಾಗಿರುವುದು ದುರಂತವೇ ಸರಿ.

–ಜಯಂತಿ ರಾಘವೇಂದ್ರ, ಆಗುಂಬೆ

## ಧಾರಾವಾಹಿ ಸೀರೆ ಸೆಳೆತ

ಈಚೆಗೆ ಪ್ರಸಿದ್ಧ ಬಟ್ಟೆ ಅಂಗಡಿಯೊಂದಕ್ಕೆ ಹೋಗಿದ್ದೆ. ಅಲ್ಲೊಂದು ನಾಮಫಲಕದಲ್ಲಿ ‘ಟಿ.ವಿ. ಧಾರಾವಾಹಿ ಸೀರೆಗಳು’ ಅಂತ ಬರೆದಿದ್ದು ನೋಡಿ ಆಶ್ಚರ್ಯವಾಯಿತು. ಧಾರಾವಾಹಿಗಳ ಮೇಲೆ ಮಹಿಳೆಯರಿಗೆ ಇರುವಷ್ಟೇ ವ್ಯಾಮೋಹವು, ಧಾರಾವಾಹಿಯಲ್ಲಿನ ಮಹಿಳಾ ಪಾತ್ರಧಾರಿಗಳು ಧರಿಸುವ ಸೀರೆಗಳ ಮೇಲೂ ಇದೆ. ಈ ಅಂಶವನ್ನು ಸೂಕ್ಷ್ಮವಾಗಿ ಮನಗಂಡಿರುವ ಅಂಗಡಿಯ ಮಾಲೀಕ, ತಮ್ಮ ಮಳಿಗೆಯಲ್ಲಿ ಇಂತಹದ್ದೊಂದು ನಾಮಫಲಕ ಹಾಕಿ ಮಹಿಳೆಯರನ್ನು ಆಕರ್ಷಿಸುತ್ತಿದ್ದಾರೆ.

–ಮೇಘನಾ ರಘುನಂದನ್, ಹೂವಿನ ಹಡಗಲಿ

